**ಇಂದು ದಿನಾಂಕ:** 30.01.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ವಕೀಲರಿಂದಃ**

ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಗೊತ್ತಿದೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ದಾವಾ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ನೋಡಿದ್ದೇನೆ. ಅಂತಹ ದಾಖಲೆ ಯಾವುದು ಎಂದು ಗೊತ್ತಿಲ್ಲ. ದಾವಾ ಆಸ್ತಿ ವಾದಿಗೆ ಹೇಗೆ ಬಂತು ಎಂದು ಗೊತ್ತಿಲ್ಲ. ವಾದಿಯ ವಿರುದ್ಧ ಅವರ ಸೊಸೆ ಅಸಲು ದಾವಾ ನಂಬರ್ 93/2002 ರಲ್ಲಿ ದಾವೆ ಸಲ್ಲಿಸಿರುವುದು ಗೊತ್ತಿಲ್ಲ. ಅಸಲು ದಾವಾ ನಂಬರ್ 93/2002 ವಜಾ ಆಗಿದೆ ಎಂದರೆ ಗೊತ್ತಿಲ್ಲ. ಅಸಲು ದಾವಾ ನಂಬರ್ 93/2002 ರ ದಾವೆಯಲ್ಲಿ ಮಂಡಿಗೌಡ (ಈ ಕೇಸಿನ ವಾದಿ) ಸಲ್ಲಿಸಿರುವ ಲಿಖಿತ ಹೇಳಿಕೆಗೆ ಈ ಕೇಸಿನ ಪ್ರತಿವಾದಿಗಳಾದ ಅಭಿಲಾಷ ಮತ್ತು ಅಭಿನಯ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ಈ ಕೇಸಿನ ಪ್ರತಿವಾದಿಗಳು ಅಸಲು ದಾವಾ ನಂಬರ್ 175/2021 ರಲ್ಲಿ ಪಿರಿಯಾಪಟ್ಟಣದ ಕಿರಯ ಶ್ರೇಣಿಯ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂಧಕಾಜ್ಞೆಗಾಗಿ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆ ದಾವೆಯ ವಾದಿ ಸ್ವಾಧೀನ ಇಲ್ಲದಿರುವ ಕಾರಣಕ್ಕೆ ವಜಾ ಆಗಿದೆ ಎಂದರೆ ಸರಿಯಲ್ಲ ನಾನು ಸ್ವಾಧೀನವಿದ್ದೇನೆ. ಕೃಷ್ಣೇಗೌಡ ಮತ್ತು ರೇಣುಕಮ್ಮರವರ ಮದುವೆಯನ್ನು ನಾನು ನೋಡಿದ್ದೇನೆ. ಆಗ ನನಗೆ 14–15 ವರ್ಷ ಆಗಿತ್ತು. ಪ್ರತಿವಾದಿಗಳ ತಂದೆ ಕೃಷ್ಣೇಗೌಡರು ರಾಜನಬಿಳಗುಲಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ ಆನೆಕಟ್ಟೆಹಡ್ಲುವಿನಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ರಾಜನಬಿಳಗುಳಿಯಲ್ಲಿ ವಾಸವಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಗಳು ಮದುವೆಯಾದ ನಂತರ ಅವರವರ ಗಂಡನ ಮನೆಯಲ್ಲಿ ವಾಸವಿದ್ದಾರೆ. ದಾವಾ ಸರ್ವೆ ನಂಬರ್ 7 ಎಕರೆ 11 ಗುಂಟೆ ಇದೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ನನಗೆ ಜಮೀನು ಇದೆ. ದಾವಾ ಆಸ್ತಿಯ ಚೆಕ್ಕುಬಂಧಿ ಗೊತ್ತಿಲ್ಲ. ವಾದಿ ತನ್ನ ಮಗ ಕುಮಾರೇಗೌಡರ ಜೊತೆ ವಾಸವಿದ್ದಾರೆ ಎಂದರೆ ಸರಿ. ಅವರ ಯೋಗಕ್ಷೇಮವನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ. ದಾವಾ ಆಸ್ತಿ ರೇಣುಕಮ್ಮನವರ ಹೆಸರಿನಲ್ಲಿದೆ. ರೇಣುಕಮ್ಮನವರ ಹೆಸರಿಗೆ ಯಾವ ದಾಖಲೆಯ ಮೇರೆಗೆ ಖಾತೆ ಬದಲಾವಣೆಯಾಗಿದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಮೇಲೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗೆ 80 ವರ್ಷ ವಯಸ್ಸಾಗಿರುವುದರಿಂದ ಅವರಿಗೆ ತೊಂದರೆ ಕೊಡಬೇಕೆಂದುದಾವಾ ಆಸ್ತಿಗೆ ನಾನು ಅತಿಕ್ರಮ ಪ್ರವೇಶ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮಾತುಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**